ಶ್ರೀ ಡಿ ಎಸ್. ನಾಡಕರ್ಣಿ.—ಇನ್ನು ವರ್ಷಕ್ಕೆ ಉಳಿದಿರುವುದೆರ್ನಾ ಆರು ತಿಂಗಳು ಮಾತ್ರ. ಇಷ್ಟರಲ್ಲಿ ತಿಂಗಳಿಗೆ 100 ಐ. ಪಿ. ಸೆಟ್ಟುಗಳಿಗೆ ಸರ್ವೀಸ್ ಮಾಡುವುದಕಾಗುತ್ತದೆಯೇ ?

† ಶ್ರೀ ಡಿ. ಪರಮೇಶ್ವರಪ್ಪ.—ಹಾಗೆ ದಾಮಾಷ ಪ್ರಕಾರ ಮಾಡುವುದಕ್ಕಾಗುವುದಿಲ್ಲ. ಈ ವರ್ಷ 600ಕ್ಕೆ ಮಾತ್ರ ಸರ್ವೀಸ್ ಕೊಡಬೇಕೆಂದು ತೀರ್ಮಾನ ಮಾಡಿಕೊಂಡಿದ್ದೇವೆ.

Sri H. V. KOUJALGI (Minister for Revenue).—Sir, before the Question No. 467 is put, I request that it may be held-over for one or two days, because I could not get all the connected files, and some of the figures are not up-to-date.

Mr. SPEAKER.—As decided Question is held over.

Grant of amount to complete the unfinished Famine Work in Raichur District

522. Sri M. NAGAPPA (Raichur).—

Will the Minister for Revenue be pleased to state :—

(*a*) whether the Government has decided to grant the necessary amount to bring the unfinished famine works to the safe stage ;

(*b*) the amount claimed by the Deputy Commissioner, Raichur ;

(*c*) the amount sanctioned by the Government ?

Sri H. V. KOUJALGI (Minister for Revenue).—

(*a*) Yes.

(*b*) Rs. 6,45,000.

(*c*) Rs. 6,65,000.

ಶ್ರೀ ಎಂ. ನಾಗಪ್ಪ.—ಅಪೂರ್ಣವಾಗಿರತಕ್ಕ ಕೆಲಸಗಳನ್ನು ಪೂರ್ಣಗೊಳಿಸಲು ಎಷ್ಟು ಹಣ ಬೇಕಾಗುತ್ತದೆಂದು ಕೇಳಿದ್ದ ಪ್ರಶ್ನೆಗೆ ಉತ್ತರವಾಗಿ 6 ಲಕ್ಷ 45 ಸಾವಿರ ಎಂದು ಹೇಳಿ ಅನಂತರ ಆ ಕೆಲಸಗಳನ್ನು ಪೂರ್ಣಗೊಳಿಸಲು ಕ್ಲೈಂ ಮಾಡಿರತಕ್ಕ ಹಣವೆಷ್ಟು ಎಂದು ಕೇಳಿರುವ ಪ್ರಶ್ನೆಗೆ 6 ಲಕ್ಷ 65 ಸಾವಿರ ಎಂದು ಉತ್ತರದಲ್ಲಿ ತಿಳಿಸಲಾಗಿದೆ. ಅಂದರೆ 20 ಸಾವಿರ ರೂಪಾಯಿಗಳನ್ನು ಹೆಚ್ಚಿಗೆ ಕೊಟ್ಟಿದ್ದೀರಾ ?

ಶ್ರೀ ಎಚ್. ವಿ. ಕೌಜಲಗಿ.—ಅವರು ಅಷ್ಟು ಹಣವನ್ನು ಹೆಚ್ಚಿಗೆ ಖರ್ಚುಮಾಡಿದ್ದಾರೆ.

ಶ್ರೀ ಎಂ. ನಾಗಪ್ಪ.—ಕನ್ನಡದ ಪ್ರಶ್ನೋತ್ತರದಲ್ಲಿ ಕೊಟ್ಟಿರತಕ್ಕ ಅಂಕಿಅಂಶಗಳಿಗೂ ಮತ್ತು ಇಂಗ್ಲೀಷ್ ಪ್ರಶ್ನೋತ್ತರದಲ್ಲಿ ಕೊಟ್ಟಿರತಕ್ಕ ಅಂಕಿ ಅಂಶಗಳಿಗೂ ಬಹಳ ಹೆಚ್ಚು ಕಡಮೆ ಇದೆ. ಈ ಎರಡರಲ್ಲಿ ಯಾವುದು ಸರಿಯಾದ್ದು ?

ಶ್ರೀ ಎಚ್. ವಿ. ಕೌಜಲಗಿ.—ಇಂಗ್ಲೀಷಿನಲ್ಲಿ ಇರತಕ್ಕ ಅಂಕೀ ಅಂಶಗಳು ಸರಿಯಾಗಿವೆ.

ಶ್ರೀ ಬಿ. ಪಿ. ಗಂಗಾಧರ್.—ಈ ಪರಿಹಾರಕಾರ್ಯಗಳನ್ನು ಹೀಗೇ ಯಾವಾಗಲೂ ಮಳೆಗಾಳಿಗೆ ನಾಶವಾಗತಕ್ಕ ರೀತಿಯಲ್ಲಿ ಆ ಕೆಲಸಗಳನ್ನು ಮಾಡುತ್ತೀರೋ ಅಥವಾ ಅವುಗಳನ್ನು ಏನಾದರೂ ಒಂದು ಶಾಶ್ವತವಾದ ತಳಹದಿಯಮೇಲೆ ಮಾಡಬೇಕೆಂದಿದ್ದೀರೋ ?

ಶ್ರೀ ಎಚ್. ವಿ. ಕೌಜಲಗಿ.—ಅಂಥ ನಾಶವಾಗತಕ್ಕ ಕೆಲಸಗಳನ್ನು ಯಾವತ್ತೂ ಮಾಡಿಲ್ಲ. ಮುಂದೆಯೂ ಅಂಥ ಕೆಲಸಗಳನ್ನು ಮಾಡುವುದಿಲ್ಲ.

ಶ್ರೀ ಕೆ. ಎಚ್. ಪಾಟೀಲ್.—ನಿಜವಾಗಿ ಧಾರವಾಡ ಜಿಲ್ಲೆಯಲ್ಲಿ ಇದುವರೆಗೆ ಅನೇಕ ಕಾಮಗಾರಿಗಳು ಹಾಳಾಗಿ ಹೋಗಿವೆ, ಮಳೆಯಾಗದೆ ಕೋಟ್ಯಾಂತರ ರೂಪಾಯಿಗಳು ಹಾಳಾಗುತ್ತಿವೆ. ಆದ್ದರಿಂದ ಈಗಲಾದರೂ ಅಧಿಕಾರಿಗಳಿಗೆ ಆ ಕಾಮಗಾರಿಗಳನ್ನು ಸುರಕ್ಷಿತ ಹಂತಕ್ಕೆ ತರ ಬೇಕೆಂದು ಆದೇಶವನ್ನು ನೀಡುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಧಾರವಾಡ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಈಗಾಗಲೇ ಅನೇಕ ಕಾಮಗಾರಿಗಳನ್ನು ತೆಗೆದುಕೊಂಡಿದೆ. ಇನ್ನೂ ಕೆಲವು ಕೆಲಸಗಳನ್ನು ಅಲ್ಲಿ ಒಂದು ಮಟ್ಟಕ್ಕೆ ತರುತ್ತೇವೆಂದು ಪುನಃ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ಹಂಜಿ ಶಿವಣ್ಣ.—ಕ್ಷಾಮ ಪರಿಹಾರ ನಿಧಿಗೆ ಕೊಡುವ ಹಣವನ್ನು ಇಂಜಿನಿಯರಿಂಗ್ ಇರಾಖೆಯಿಂದ ಮತ್ತು ತಾಲ್ಲೂಕು ಬೋರ್ಡಿನಿಂದ ಕೊಡುತ್ತಾರೆ. ಇದರಲ್ಲಿ ತಾಲ್ಲೂಕು ಬೋರ್ಡಿನಿಂದ ಖರ್ಚಾಗತಕ್ಕ ಹಣ ಬಹುತೇಕ ಪೋಲಾಗಿದೆ. ಆದ್ದರಿಂದ ಆ ಕಾಮಗಾರಿಗಳನ್ನು ಇಂಜಿನಿಯರಿಂಗ್ ಇಲಾಖೆಗಾದರೂ ಕೊಟ್ಟು ಅವಷ್ಟು ಜಾಗ್ರತೆ ಮಾಡುವುದಕ್ಕಾಗುತ್ತದೆಯೇ ?

ಶ್ರೀ ಎಚ್. ವಿ. ಕೌಜಲಗಿ.—ತಾಲ್ಲೂಕು ಬೋರ್ಡಿನಿಂದ ಕೊಟ್ಟಂಥ ಹಣ ಪೋಲಾಗಿದೆ ಎಂಬ ಬಗ್ಗೆ ಒಂದು ನಿರ್ದಿಷ್ಟವಾದ ಉದಾಹರಣೆಯನ್ನು ಕೊಟ್ಟರೆ, ಅದನ್ನು ನಾನು ವಿಚಾರಮಾಡುತ್ತೇನೆ.

Sri D. B. KALMANKAR.—In case of rural road works, when does the Government expect the said works to be completed ?

Sri H. V. KOUJALGI.—That is a technical matter and it depends upon the opinion of the Engineers.

ಶ್ರೀ ಎಸ್. ಎಂ. ಗುರೆಡ್ಡಿ.—ಆ ಜಿಲ್ಲೆಯಲ್ಲಿ ಕ್ಷಾಮ ಪರಿಹಾರ ಕೆಲಸಗಳನ್ನು ಪೂರ್ತಿ ಮಾಡಲಿಕ್ಕೆ ತಮ್ಮನ್ನು ಕೇಳಿದಂಥ ಹಣವೆಷ್ಟು ಕೇಂದ್ರ ಸರ್ಕಾರದವರು ತಾವು ಕೇಳಿದ್ದರಲ್ಲಿ ಕೊಟ್ಟ ಹಣವೆಷ್ಟು ?

ಶ್ರೀ ಎಚ್. ವಿ. ಕೌಜಲಗಿ.—ಇದು ಕೇವಲ ರಾಯಚೂರು ಜಿಲ್ಲೆಗೆ ಸಂಬಂಧಪಟ್ಟುದು. ಬೇರೆ ಪ್ರಶ್ನೆ ಹಾಕಿ.

ಶ್ರೀ ಎನ್. ಎ. ಚನ್ನೇಗೌಡ.—ಕ್ಷಾಮ ಪರಿಹಾರ ಕೆಲಸಗಳನ್ನು ಅಗ್ರಿಕಲ್‌ಚರಲ್ ಲೇಬರರ್ಸ್‌ಗೆ ಕೂಲಿ ಸಿಗುವ ಉದ್ದೇಶದಿಂದ ಕೈಗೊಳ್ಳಲಾಗುತ್ತಿದೆ. ಆದರೆ ಅವರಿಗೆ ವಾಸ್ತವಿಕವಾಗಿ ಯಾವ ಪರಿಹಾರವೂ ದೊರಕುತ್ತಾ ಇಲ್ಲ. ಹೆಚ್ಚಿಗೆ ಪರಿಹಾರ ದೊರಕುತ್ತಾ ಇರುವುದು ಕಂಟ್ರಾಕ್ಟರ್ಸ್ ಅವರಿಗೆ. ಆದ್ದರಿಂದ ಸರ್ಕಾರದವರು ಬೇರೆ ವಿಧಾನವನ್ನು ಯೋಚಿಸಿ ನಿಜವಾಗಿ ಪರಿಹಾರ ಬೇಕಾಗಿರತಕ್ಕವರಿಗೆ ಅದರಲ್ಲಿಯೂ ಕೃಷಿ ಕೂಲಿಗಾರರಿಗೆ ಸಿಗುವ ಹಾಗೆ ಮಾಡುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಫ್ಯಾಮಿನ್ ರೂಲ್ಸ್ ಪ್ರಕಾರ ಕೇವಲ ಇದು ಯಾರಿಗೆ ಸಂಬಂಧಪ್ಪೋ ಅವರಿಗೆ ಮುಟ್ಟುತ್ತದೆ. ಆ ಪ್ರಕಾರ ಮಸ್ಟರ್ ರೋಲ್ಸ್ ಉಂಟು. ಅವರಿಗೆ ಕೊಡುತ್ತಾರೆ. ಏನಾದರೂ ಆ ರೀತಿ ಅನ್ಯಾಯ ಮಾಡಿದ್ದರೆ ಅದನ್ನು ವಿಚಾರ ಮಾಡುತ್ತೇನೆ.

ಶ್ರೀ ಎಂ. ನಾಗಪ್ಪ.—ರಾಯಚೂರಿನ ಬಹುಭಾಗದ ರೈತರು ಕಪ್ಪು ಜಮೀನಿನಲ್ಲಿರುವುದರಿಂದ ಮಳೆಯಿಂದ ಮಣ್ಣು ಹೊತ್ತುಕೊಂಡು ಹೋಗಿ ರಸ್ತೆಗೆ ಅಡಚಣೆಯಾಗುತ್ತಿದೆ. ಅದಕ್ಕಾಗಿ ಎಲ್ಲೆಲ್ಲ ಬಿಟ್‌ಲೆಟ್ಸ್ ಬೇಕೋ, ಎಲ್ಲೆಲ್ಲಿ ಕಲ್‌ವರ್ಟ್ಸ್ ಬೇಕೋ ಅವನ್ನು ಮಾಡಲಿಕ್ಕೆ ರೈತರು ತಮ್ಮವಾಗಿಯೇ ಹಣ ಕೊಡುತ್ತಾರೆ. ಆದ್ದರಿಂದ ಲೋಕೋಪಯೋಗಿ ಶಾಖೆಗೆ ಏನಾದರೂ ಇದರ ಬಗ್ಗೆ ಒಂದು ಆದೇಶವನ್ನು ಸರ್ಕಾರ ಕೊಡುತ್ತದೆಯೇ ?

Sri H. V. KOUJALGI.—So far as Raichur District is concerned the local officers have asked only for about 6 lakhs and odd and that much amount has been granted. If there is further demand from the local officers and if it is necessary the Government will consider it.

ಶ್ರೀ ವಿ. ಎನ್. ಪಾಟೀಲ್.—ಫ್ಯಾಮಿನ್ ಕಂಡೀಷನ್ಸ್ ಇರುವ ಕಡೆಗಳಲ್ಲಿ ರಿಲೀಫ್ ಕೊಡುವುದಕ್ಕಾಗಿ ಎಲ್ಲೆಲ್ಲ ಸಾಧ್ಯವಿದೆಯೋ ಅಂತಹ ಕಡೆಗಳಲ್ಲಿ ಚಿಕ್ಕ ಚಿಕ್ಕ ಕೆರೆಗಳನ್ನು ಕಟ್ಟಿದರೆ ಹೆಚ್ಚಿಗೆ ನೀರಿನ ಸೌಲಭ್ಯ ಕೊಡಬಹುದಲ್ಲವೇ ? ಇಂತಹ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಾ ?

Sri H. V. KOUJALGI.—While selecting the scarcity works, primary importance in given to well works, tank works and irrigation works.

Mr. SPEAKER.—Sri D. B. Kalmankar is authorised to put question No. 524 On behalf of Sri G. Chandrakanth. He may put it.

Action against a Police Head Constable of Bidar

524. Sri D. B. KALMANKAR (Aland) [on behalf of Sri G. CHANDRAKANTH (Bidar)].—

Will the Chief Minister be pleased to state :—

(*a*) whether a Police Head Constable of Bidar has shot an old man in broad day light in Mandi at Bidar on 15th April 1969 while on duty, with Government gun and bullet ;

(*b*) whether this Head Constable was on Bandobust duty in connection with the visit of Sardar Ujjal Singh, the Governor of Tamil Nadu ;

(*c*) whether this Head Constable had gone mad sometime back and he was taken on duty even though he was not recovered fully ;

(*d*) the action taken against this Head Constable ?

Sri VEERENDRA PATIL (Chief Minister).—

(*a*) It is alleged that a Head Constable of D. A. R. at Bidar shot an old man in Bhaji Mandi at Bidar on 15th April 1969 at about 7-15 P.M.

(*b*) Yes.

(*c*) It is a fact that the Head Constable was admitted into the Mental Hospital, Dharwar on 10th May 1968 and discharged from the Hospital on 2nd August 1968 as he was certified to be fit to resume his duties.

(*d*) The matter is *sub-judice*.

Sri D. B. KALMANKAR.—It is said that the Head Constable was admitted into the Mental Hospital, Dharwar on 10th May 1968. The shooting took place on 15th April 1969 when that old man was shot dead which amounts to a murder. May I know whether any case has been filed against the Head Constable ?

Sri VEERENDRA PATIL.—Immediately the accused was arrested, a case in crime No. 49/69 under Section 203 of the Indian Penal Code was registered and a charge sheet was filed on 14th July 1969. The case is now pending trial.

Sri D. B. KALMANKAR.—As per civil rules is it not a fact that any person who is involved in criminal cases must be suspended from duty till the enquiry is over ?